


ವ್ಯಕ್ತಿಯೊಬ್ಬ ತನ್ನ ಹೆಂಡತಿಯೊಂದಿಗೆ ಒಂದು ಭವ್ಯ ಹೋಟೆಲ್‌ಗೆ ಹೋದ. ಹೆಚ್ಚು ಗದ್ದಲವಿಲ್ಲದ ಜಾಗ ಆಯ್ಕೆಮಾಡಿಕೊಂಡು ಹೆಂಡತಿಯೊಂದಿಗೆ ಕೂತ. ಎರಡು ನಾರ್ತ್ ಇಂಡಿಯನ್ ಊಟಕ್ಕೆ ಆರ್ಡರ್ ಮಾಡಿದ.

ಊಟದ ಥಾಲಿ ಬಂದ ನಂತರ ಗಂಡಹೆಂಡತಿ ಮುಕ್ಕಾಲು ಪಾಲು ಊಟ ಮಾಡಿದ್ದರು. ಆಗಲೇ ಗಂಡ ಮಾಣಿಯನ್ನು ಕರೆದು ಗದರಿದ, 'ಏನಯ್ಯಾ! ಒಳಗಡೆ ಕ್ಲೀನ್‌ನೆಸ್ ಇಲ್ಲ ಅಂತ ಕಾನ್ಸುತ್ತೆ, ಇಲ್ನೋಡು ಜಿರಲೆ ಬಿದ್ದಿದೆ ನನ್ನ ಹೆಂಡತಿಯ ತಟ್ಟೆಯಲ್ಲಿ. ಕರಿಯೆಯ್ಯಾ, ನಿಮ್ಮ ಮ್ಯಾನೇಜರನ್ನು!'

'ಸಾರ್, ದಯವಿಟ್ಟು ಕೂಗಬೇಡಿ. ಎಲ್ಲೋ ಅಪ್ಪಿತಪ್ಪಿ ಹೀಗಾಗಿದೆ. ನಾನು ನಿಮಗೆ ಬೇರೆ ಊಟವನ್ನು ತರ್ತೀನಿ' ಎಂದು ಮಾಣಿ ಅವರಿಬ್ಬರ ತಟ್ಟೆಗಳನ್ನು ತೆಗೆಯುವಂತೆ ಕ್ಲೀನರ್‌ಗೆ ಹೇಳಿ ಒಳಗೆ ಓಡಿದ.

ಮಾಣಿ ಒಳಗೆ ಹೋದ ನಂತರ, ಅವರ ಸಮೀಪದಲ್ಲಿ ಇನ್ನೊಂದು ಕುರ್ಚಿಯಲ್ಲಿ ಕೂತು ಊಟ ಮಾಡುತ್ತಿದ್ದ ವ್ಯಕ್ತಿ ಕೇಳಿದ, 'ಮೇಡಂ, ನನಗೊಂದು ಜಿರಲೆ ಕೊಡ್ತೀರ, ಪ್ಲೀಸ್!'

'ನೋಡಿ, ನಾವು ಒಂದೇ ಜಿರಲೆಯನ್ನು ತಂದಿದ್ವಿ' ಹೆಂಡತಿ ಮೆಲ್ಲನೆ ಅವನೆಡೆಗೆ ವಾಲಿ ಪಿಸುಗುಟ್ಟಿದಳು.

ಚಿರಪರಿಚಿತ ಮುಖಂಡರೊಬ್ಬರು ತಾವು ಇಹಲೋಕ ತ್ಯಜಿಸಿದ ನಂತರ ತಮ್ಮ ಹೃದಯ ಮತ್ತು ಮೆದುಳನ್ನು ದಾನ ಮಾಡುವುದಾಗಿ ಆಸ್ಪತ್ರೆಗೆ ಪತ್ರ ಬರೆದರು.

ಆದರೆ, ಆಸ್ಪತ್ರೆಯಿಂದ ಒಂದು ವಾರವಾದರೂ ಉತ್ತರ ಬರಲಿಲ್ಲ. ಮುಖಂಡರು ಮತ್ತೆ ನೆನಪಿಸುತ್ತಾ ಆಸ್ಪತ್ರೆಗೆ ಇನ್ನೊಂದು ಪತ್ರವನ್ನು ಬರೆದರು.

ಆಸ್ಪತ್ರೆಯಿಂದ ಕೂಡಲೇ ಉತ್ತರ ಹೀಗೆ ಬಂತು: 'ಕ್ಷಮಿಸಿ, ನಾವು ಒಂದು ವಾರ ನಿಮ್ಮ ಪತ್ರದ ಬಗ್ಗೆಯೇ ಚಿಂತಿಸಿದೆವು. ನಿಮ್ಮ ಕಾಳಜಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ನಿಮ್ಮ ಶರೀರದಲ್ಲಿ ಮೆದುಳು ಮತ್ತು ಹೃದಯವಿದ್ದರೆ, ನೀವು ಇಹಲೋಕ ತ್ಯಜಿಸಿದ ನಂತರ ಖಂಡಿತ ಅವುಗಳನ್ನು ತೆಗೆದುಕೊಳ್ಳುತ್ತೇವೆ ಎಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ!'

***

ಅದೊಂದು ಬಸ್ ನಿಲ್ದಾಣ. ಕೆಲವು ಜನ ಬಸ್ಸುಗಳಿಗೆ ಹತ್ತುತ್ತಿದ್ದರು, ಕೆಲವರು ಆಗ ತಾನೇ ಬಂದಿದ್ದ ಬಸ್ಸುಗಳಿಂದ ಇಳಿಯುತ್ತಿದ್ದರು. ಒಂದು ಬಸ್ ಸ್ಟಾಪಿನ ಹತ್ತಿರ ಗಂಡ ನಿಂತು ಹೆಂಡತಿ ಬರುವ ಬಸ್ಸನ್ನು ಕಾಯುತ್ತಿದ್ದ. ಆ ಬಸ್ಸು ಬಂತು. ಕೊನೆಯಲ್ಲಿ ಹೆಂಡತಿ ಇಳಿದಳು. ಇಳಿದವಳೇ ಗಂಡನ ಮುಖವನ್ನು ನೋಡಿ ಸಿಡಿಮಿಡಿಗುಟ್ಟಿದಳು. 'ಸ್ವಲ್ಪ ನಗುಮುಖದಿಂದ ನನ್ನನ್ನು ನೋಡಿ, ಅಲ್ನೋಡಿ ಎದುರಿಗೆ ನಿಂತಿರುವ ಗಂಡ–ಹೆಂಡತಿಯನ್ನು. ಗಂಡ ಎಷ್ಟು ಚೆನ್ನಾಗಿ ನಗು–ನಗುತ್ತಾ ತಮ್ಮ ಹೆಂಡತಿಯೊಂದಿಗೆ ಮಾತನಾಡುತ್ತಿದ್ದಾನೆ.'

ಅವನು ತನ್ನ ಹೆಂಡತಿಯನ್ನು ಬರಮಾಡಿಕೊಳ್ಳುತ್ತಿಲ್ಲ, ತನ್ನ ಹೆಂಡತಿಯನ್ನು ಊರಿಗೆ ಕಳುಹಿಸಿಲು ಬಂದಿರಬೇಕು!. ಎಂದು ಗಂಡ ನಿಟ್ಟುಸಿರುಬಿಟ್ಟ.

***

ಮಹಿಳೆಯೊಬ್ಬಳು ಸೀರೆ ಅಂಗಡಿಗೆ ಹೋಗಿ ಆರು ಸೀರೆಗಳನ್ನು ಆಯ್ಕೆ ಮಾಡಿದಳು. ಅವಳ ವರ್ತನೆಯನ್ನು ಕಂಡು ಸೀರೆ ವ್ಯಾಪಾರಿ ಅವಳಿಗೆ, ನಿಮಗೆ ಈ ಆರು ಸೀರೆಗಳೂ ತುಂಬಾ ಮ್ಯಾಚ್ ಆಗುತ್ತವೆ. ಆರನ್ನೂ ತೆಗೆದುಕೊಳ್ಳಿ ಎಂದು ಹೊಗಳಿದ.

ಆಗ ಆ ಮಹಿಳೆ ಸೀರೆ ವ್ಯಾಪಾರಿಗೆ ಷರತ್ತು ವಿಧಿಸಿದಳು, 'ನೋಡಿ, ನಾನು ಈ ಆರು ಸೀರೆಗಳನ್ನೂ ಖರೀದಿಸಿ ಮನೆಗೆ ತೆಗೆದುಕೊಂಡು ಹೋಗ್ತೀನಿ. ಆದರೆ ನಮ್ಮ ಯಜಮಾನರು ಮೂರ್‍ನಾಲ್ಕು ಸೀರೆಗಳನ್ನು ವಾಪಸ್ ಮಾಡಲು ಬಂದರೆ, ನೀವು ಅವರಿಗೆ, ಒಮ್ಮೆ ಮಾರಾಟವಾದ ಸೀರೆಗಳನ್ನು ಯಾವ ಕಾರಣಕ್ಕೂ ವಾಪಸ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಬೇಕು' ಎಂದಳು.

***

ಒಂದು ಕಂಪ್ಯೂಟರ್‌ನಲ್ಲಿ ಹತ್ತು ರೂಪಾಯಿಗಳ ನೋಟನ್ನು ಹಾಕಿದಾಗ ಅದರಿಂದ ಹಾಕಿದವರ ಭವಿಷ್ಯಕ್ಕೆ ಸಂಬಂಧಿಸಿದಂತೆ ಒಂದು ಚಿಕ್ಕ ಕಾರ್ಡು ಹೊರಬರುತ್ತಿತ್ತು. ಒಮ್ಮೆ ಒಬ್ಬರು ಶಿಕ್ಷಕರು ತಮ್ಮ ಸಹಿಯೊಂದಿಗೆ ಕಂಪ್ಯೂಟರಿನ ಹೋಲ್‌ನಲ್ಲಿ ಹತ್ತು ರೂಪಾಯಿಯ ನೋಟನ್ನು ಹಾಕಿ, ಕಾರ್ಡನ್ನು ನಿರೀಕ್ಷಿಸುತ್ತಾ ನಿಂತರು. ಎರಡು ನಿಮಿಷಗಳ ನಂತರ ಕಾರ್ಡ್ ಬಂತು. ಅದರಲ್ಲಿ ಹೀಗೆ ಬರೆಯಲಾಗಿತ್ತು 'ನೀವು ನಿಮ್ಮ ಸಾಮರ್ಥ್ಯ ಮತ್ತು ಯೋಗ್ಯತೆಯನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನೀವು ನಿಮ್ಮ ಜೀವನದಲ್ಲಿ ಉನ್ನತಿಯನ್ನು ಗಳಿಸುವಿರಿ.'

ಶಿಕ್ಷಕರು ಕುತೂಹಲದಿಂದ ಇನ್ನೊಂದು ಹತ್ತು ರೂಪಾಯಿಯ ಮೇಲೆ 'ಕತ್ತೆ' ಎಂದು ಬರೆದು ಸಹಿ ಮಾಡಿ ಕಂಪ್ಯೂಟರ್‌ಗೆ ಹಾಕಿದರು. ಎರಡು ನಿಮಿಷಗಳ ನಂತರಕಾರ್ಡ್ ಬಂತು. ಅದರಲ್ಲಿಹೀಗೆಬರೆಯಲಾಗಿತ್ತು 'ನೀವು ಕತ್ತೆಯಂತೆ ಮೈ ಬಗ್ಗಿಸಿ ನೌಕರಿ ಮಾಡಿದ್ದರೆ ಮುಖ್ಯ ಶಿಕ್ಷಕರಾಗುತ್ತಿದ್ದಿರಿ!'

■ ಹಿಂದಿಯಿಂದ: **ಡಿ.ಎನ್. ಶ್ರೀನಾಥ್**

